ಸಾಕ್ಷಿಯನ್ನು ದಿ: 11.11.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-2

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ:-**

1. ನನಗೆ ಓದಲು ಬರೆಯಲು ಬರುವುದಿಲ್ಲ, ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಸಹಿ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆಗೆ ನಾನು ನ್ಯಾಯಾಲಯದಲ್ಲಿ ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ಕೆ ಎಲ್ ನಾಗರಾಜು ಮರಣ ಹೊಂದಿ ಸುಮಾರು 28 ವರ್ಷಗಳಾಗಿವೆ. ಕೆ ಎಲ್ ನಾಗರಾಜುರವರ ತಂದೆ ಹೆಸರು ಲಿಂಗಶೆಟ್ಟಿ ವಾದಿಯರಿಗೂ ನನಗೂ ಸಂಬಂಧವಿದೆ. ಕೆ ಎಲ್ ನಾಗರಾಜುವಿನ ತಾಯಿಯ ಹೆಸರು ಗೊತ್ತಿಲ್ಲ. ಲಿಂಗಶೆಟ್ಟಿ ಮರಣ ಹೊಂದಿರುತ್ತಾರೆ. ಲಿಂಗಶೆಟ್ಟಿಯ ಹೆಂಡತಿ ದೇವಮ್ಮಳು ಸಹ ಮರಣ ಹೊಂದಿರುತ್ತಾರೆ. ಕೆಂಚೇಗೌಡನ ಮಗ ಕೆಂಚೇಗೌಡ ನನಗೆ ಗೊತ್ತಿಲ್ಲ. ಕೆಂಪಯ್ಯನದೊಡ್ಡಿ ಚೌಡಶೆಟ್ಟಿ ನನಗೆ ಗೊತ್ತಿದ್ದರು ಅವರು ನನಗೆ ಶಿಕ್ಷಕರಾಗಿದ್ದರು. ನನ್ನನ್ನು ವಾದಿಯರು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ಕೆಂಚೇಗೌಡ ಮತ್ತು ಚೌಡಶೆಟ್ಟಿ ಗ್ರಾಮದಲ್ಲಿ ಹಿರಿಯರಾಗಿದ್ದರು ಎಂದರೆ ಸರಿ. ಕೆ ಎಲ್ ನಾಗರಾಜು ಯಾವುದಾದರೂ ಆಸ್ತಿಯನ್ನು ಮಾರಾಟ ಮಾಡಿದ್ದರೋ ಇಲ್ಲವೋ ಗೊತ್ತಿಲ್ಲ. 4 ನೇ ಪ್ರತಿವಾದಿ ಗೊತ್ತಿರುತ್ತಾರೆ. 4 ನೇ ಪ್ರತಿವಾದಿ ಯಾವುದಾದರೂ ವ್ಯವಹಾರ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ವಾದಿಯರು ಏನು ಪರಿಹಾರ ಕೋರಿ ಈ ದಾವೆ ಸಲ್ಲಿಸಿರುತ್ತಾರೆ ಗೊತ್ತಿಲ್ಲ. ಕೆ ಎಲ್ ನಾಗರಾಜು ಸ್ಥಿತಿವಂತರಾಗಿರಲಿಲ್ಲ. ಕೆ ಎಲ್ ನಾಗರಾಜು ದುಶ್ಚಟಗಳಿಗೆ ದಾಸನಾಗಿದ್ದನು. ಕೆ ಎಲ್ ನಾಗರಾಜು ದುಶ್ಚಟಗಳಿಗೆ ದಾಸನಾಗಿದ್ದ ಬಗ್ಗೆ ಯಾವುದೇ ದೂರುಗಳು ದಾಖಲಾಗಿದ್ದ ಬಗ್ಗೆ ಗೊತ್ತಿಲ್ಲ. ಕೆ ಎಲ್ ನಾಗರಾಜು ಕುಡಿಯುತ್ತಿದ್ದನು ಎಂಬ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ಕೆ ಎಲ್ ನಾಗರಾಜು ತಮ್ಮ ಕುಟುಂಬದ ನಿರ್ವಹಣೆಗಾಗಿ ಮತ್ತು ಚಿಲ್ಲರೆ ಸಾಲ ತೀರಿಸಲು, ಮಕ್ಕಳಡ ವಿದ್ಯಭ್ಯಾಸಕ್ಕಾಗಿ 4 ನೇ ಪ್ರತಿವಾದಿಗೆ ದಾವಾ ಐಟಂ ನಂ.4 ರ ಸ್ವತ್ತನ್ನು 2006 ರಲ್ಲಿ ಮಾರಾಟ ಮಾಡಿರುತ್ತಾನೆಂದರೆ ಗೊತ್ತಿಲ್ಲ. ದಾವಾ ಐಟಂ ನಂ.4 ರ ಆಸ್ತಿಯಲ್ಲಿ 4 ನೇ ಪ್ರತಿವಾದಿ 2006 ರಿಂದ ಸ್ವಾಧೀನದಲ್ಲಿದ್ದಾರೆಂದರೆ ಗೊತ್ತಿಲ್ಲ. ನಾನು ದಾವಾ ಆಸ್ತಿಯನ್ನು ನೋಡಿರುವುದಿಲ್ಲ. ನಾನು 30 ವರ್ಷಗಳ ಹಿಂದೆ ದಾವಾ ಆಸ್ತಿಯನ್ನು ನೋಡಿರುತ್ತೇನೆ. ನಾನು ಈಗ ದಾವಾ ಆಸ್ತಿಗಳನ್ನು ಯಾರು ವ್ಯವಸಾಯ

ಮಾಡುತ್ತಿದ್ದಾರೆ ನೋಡಿಲ್ಲ. ನಾನು ವಾದಿಗಳ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕೆ ಎಲ್ ನಾಗರಾಜುರವರ ತಾಯಿ ದೇವಮ್ಮಳು ಸಹ ಕ್ರಯ ಪತ್ರಕ್ಕೆ ಸಾಕ್ಷಿದಾರಳಾಗಿ ಸಹಿ ಮಾಡಿರುತ್ತಾಳೆಂದರೆ ಗೊತ್ತಿಲ್ಲ. ಕೆಂಚೇಗೌಡ ಮತ್ತು ಚೌಡಶೆಟ್ಟಿಯೂ ಸಹ ಕ್ರಯಪತ್ರಕ್ಕೆ ಸಾಕ್ಷಿದಾರರಾಗಿರುತ್ತಾರೆಂದರೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ